# ನಗರದಲ್ಲಿ 6 ಜನಕ್ಕೆ ಕೇವಲ ಒಂದೇ ಮರ!

## ನಗರದ ವಾಹನ ದಟ್ಟಣೆ ಪರಿಸರಕ್ಕೆ ತೀವ್ರ ಮಾರಕ | ಸುಸ್ಥಿರ ಅಭಿವೃದ್ಧಿ ಕೇಂದ್ರದ ಪರಿಸರ ವರದಿಯಲ್ಲಿ ಮಾಹಿತಿ
## ಬೆಂಗಳೂರಿನ ಶೇ.93ರಷ್ಟು ಭೂಮಿ ನಿರ್ಮಾಣ ಚಟುವಟಿಕೆಗಳಿಗೇ ಬಳಕೆ | ಇದರಿಂದ ಜೀವ ವೈವಿಧ್ಯ ಕುಸಿತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿಯಲ್ಲಿ ವಾಹನ ದಟ್ಟಣೆ, ಭೂಬಳಕೆ, ಜೀವವೈವಿಧ್ಯತೆ ಕುಸಿತ ಹಾಗೂ ಹವಾಮಾನ ಬದಲಾವಣೆಯು ಹೆಚ್ಚಾಗಿದ್ದು, ನಗರದ ಪರಿಸರಕ್ಕೆ ಮಾರಕವಾಗಿ ಪರಿಣಮಿಸುತ್ತಿದೆ ಎಂದು ಸುಸ್ಥಿರ ಅಭಿವೃದ್ಧಿ ಕೇಂದ್ರ (ಸಿಎಸ್‌ಡಿ) ಸಿದ್ಧಪಡಿಸಿರುವ 'ಬೆಂಗಳೂರು ಪರಿಸರ ವರದಿ 2021' ತಿಳಿಸಿದೆ.

ನಗರದ ಐಎಎಸ್ ಆಫೀಸ್ ಅಸೋಸಿಯೇಷನ್‌ನಲ್ಲಿ ಮಂಗಳವಾರ ಬಿಡುಗಡೆ ಮಾಡಿದ ವರದಿಯಲ್ಲಿ 'ಗಾಳಿ, ನೀರು, ತ್ಯಾಜ್ಯದಂತಹ ಸಾಂಪ್ರದಾಯಿಕ ಸಮಸ್ಯೆಗಳ ಜತೆಗೆ ಕಳೆದ ಒಂದು ದಶಕದಲ್ಲಿ ವಾಹನ ದಟ್ಟಣೆ, ಭೂಬಳಕೆ, ಜೀವವೈವಿಧ್ಯತೆ ಕುಸಿತ ಹಾಗೂ ಹವಾಮಾನ ಬದಲಾವಣೆ ಸಮಸ್ಯೆಗಳು ನಗರದಲ್ಲಿ ಹೆಚ್ಚಾಗಿವೆ. ಇದರಿಂದ ನಗರದ ಪರಿಸರ ಮತ್ತಷ್ಟು ಹಾನಿಗೊಳಗಾಗಿ, ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ನಗರದ ಪರಿಸರಕ್ಕೆ ಮಾರಕವಾಗುವ ಸಮಸ್ಯೆಗಳನ್ನು ಮನೆಗಳ ಸಮೀಕ್ಷೆ, ತಜ್ಞ ಅಭಿಪ್ರಾಯದ ಮೂಲಕ ಸಂಗ್ರಹಿಸಿದೆ.

ಸುಸ್ಥಿರ ಅಭಿವೃದ್ಧಿ ಕೇಂದ್ರ ಈ ಹಿಂದೆ 2005, 2012 ಬೆಂಗಳೂರು ಪರಿಸರ ವರದಿ ನೀಡಿತ್ತು. ಈಗ 2021ರಲ್ಲಿ ತನ್ನ ಮೂರನೇ ವರದಿಯನ್ನು ಸಿದ್ಧಪಡಿಸಿದೆ.

**ನಿರ್ಮಾಣ ಚಟುವಟಿಕೆಗೆ ಶೇ.93 ಭೂಮಿ ಬಳಕೆ:** ಬೆಂಗಳೂರಿನ ಶೇ.93.3ರಷ್ಟು ಭೂಮಿ ನಗರೀಕರಣದ ನಿರ್ಮಾಣ ಚಟುವಟಿಕೆಗಳಿಗೆ ಬಳಕೆಯಾಗಿದೆ. ವಾರ್ಡ್‌ವಾರು ಮರಗಳ ಸಾಂದ್ರತೆ ಪ್ರಮಾಣ ಶೇ.0.1ಕ್ಕಿಂತ ಕಡಿಮೆ ಇದ್ದು ಕಳಪೆಯಾಗಿದೆ. ಪ್ರತಿ ಆರು ಮಂದಿಗೆ ಒಂದು ಮರವಿದೆ. ಅರ್ಧದಷ್ಟು ಕೆರೆಗಳು ಒತ್ತುವರಿಯಾಗಿ ವಿವಿಧ ಚಟುವಟಿಕೆಗಳಿಗೆ ಬಳಕೆಯಾಗುತ್ತಿವೆ. 2015 ಮಾಹಿತಿ ಪ್ರಕಾರ, ಹಸಿರು ಹೊದಿಕೆ 740 ಚದರ ಕಿ.ಮೀದಿಂದ 300 ಚದರ ಕಿ.ಮೀ ಇಳಿಕೆಯಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.



ಸುಸ್ಥಿರ ಅಭಿವೃದ್ಧಿ ಕೇಂದ್ರ (ಸಿಎಸ್‌ಡಿ) ಸಿದ್ಧಪಡಿಸಿರುವ 'ಬೆಂಗಳೂರು ಪರಿಸರ ವರದಿ 2021' ಬಿಡುಗಡೆ ಸಮಾರಂಭದಲ್ಲಿ ಕೇಂದ್ರದ ಅಧ್ಯಕ್ಷ ಡಾ| ಎ.ರವೀಂದ್ರ, ಕಾರ್ಯಕಾರಿ ನಿರ್ದೇಶಕ ಡಾ| ಆರ್.ಶ್ರೀನಿವಾಸ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ಶ್ರೀನಿವಾಸಲು ಭಾಗಹಿಸಿದ್ದರು.

**ನಗರದಲ್ಲಿವೆ 80 ಲಕ್ಷ ವಾಹನ; ಇದರಲ್ಲಿ ಶೇ.70 ದ್ವಿಚಕ್ರ ವಾಹನ:** 2021ರ ಅಂತ್ಯಕ್ಕೆ ನಗರದಲ್ಲಿ ವಾಹನಗಳ ಸಂಖ್ಯೆ 80 ಲಕ್ಷಕ್ಕೆ ಹೆಚ್ಚಳವಾಗಿದ್ದು, ಈ ಪೈಕಿ ಶೇ.70ರಷ್ಟು ದ್ವಿಚಕ್ರ ವಾಹನ, ಶೇ.20ರಷ್ಟು ನಾಲ್ಕು ಚಕ್ರದ ವಾಹನಗಳಿವೆ. ಇದರಿಂದ ವಾಯುಗುಣಮಟ್ಟ ಸೂಚ್ಯಾಂಕ 129ಕ್ಕೆ ತಲುಪಿದೆ. ಇನ್ನು 2012ಕ್ಕೆ ಹೋಲಿಸಿದರೆ ವಾಹನಗಳಿಂದ ಉಂಟಾಗುವ ಮಾಲಿನ್ಯ (ಶಬ್ದ ಮಾಲಿನ್ಯ, ಹೊಗೆ) ಸಂಚಾರಿ ದಟ್ಟಣೆ ಗಣನೀಯ ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

**ಶಬ್ದ ಮಾಲಿನ್ಯ ಸಮಸ್ಯೆ:** ವರದಿ ಸಿದ್ಧಪಡಿಸುವ ಸಂದರ್ಭದಲ್ಲಿ ಶೇ.80ರಷ್ಟು ಮಂದಿ ಶಬ್ದಮಾಲಿನ್ಯದಿಂದ ಬಳಲುತ್ತಿದ್ದೇವೆ. ಪ್ರಮುಖವಾಗಿ ವಾಹನ ದಟ್ಟಣೆ ಮತ್ತು ವಾಣಿಜ್ಯ ಸಂಕೀರ್ಣಗಳಿಂದ ಶಬ್ದ ಮಾಲಿನ್ಯ ಹೆಚ್ಚಿದೆ ಎಂದು ತಿಳಿಸಿದ್ದಾರೆ. ನೀಲಸಂದ್ರ, ಪಾದರಾಯನಪುರ, ಕಾವೇರಿಪುರ, ಹೊಂಗಸಂದ್ರದಲ್ಲಿ ಶಬ್ದ ಮಾಲಿನ್ಯ ಅತ್ಯಧಿಕವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

### ಪರಿಸರ ರಕ್ಷಣೆಗೆ ಸಲಹೆ

- ನಿಸರ್ಗ ಉಳಿಸಲು ನಗರದ ಜನರು, ಪಾಲಿಕೆ ಆದ್ಯತೆ ನೀಡಬೇಕು
- ಹವಾಮಾನ ಬದಲಾವಣೆ ತಗ್ಗಿಸಲು ನಗರದಲ್ಲಿ ಸೂಕ್ಷ್ಮ ಹವಾಮಾನ ವಲಯ ರಚಿಸಬೇಕು
- ನಿರ್ಮಾಣ ಚಟುವಟಿಕೆಗಳಿಗೆ ಹೊಸ ನಿಯಮ ಅಳವಡಿಸಿಕೊಳ್ಳಬೇಕು.
- ದ್ವಿಚಕ್ರ ವಾಹನಗಳ ಸಂಖ್ಯೆ ತಗ್ಗಿಸಲು ಆದ್ಯತೆ ನೀಡಬೇಕು.

## ಫುಟ್‌ಪಾತ್ ಇಲ್ಲದೆ ಜನರ ಪರದಾಟ



ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದ ಸಮೀಪದ ರೈಲ್ವೆ ಅಂಡರ್ ಪಾಸ್‌ನಲ್ಲಿ ಸೂಕ್ತ ಪಾದಚಾರಿ ಮಾರ್ಗವಿಲ್ಲದೇ ಸಾರ್ವಜನಿಕರು ಪರದಾಡುತ್ತಿದ್ದಾರೆ.

# ನಿಮ್ಹಾನ್ಸ್ ಆಸ್ಪತ್ರೆ ಆವರಣದಲ್ಲಿ ಬೀದಿ ನಾಯಿ ನಿಯಂತ್ರಣಕ್ಕೆ ಸಮಿತಿ ರಚನೆ

## ಹೈಕೋರ್ಟ್‌ಗೆ ನಿಮ್ಹಾನ್ಸ್, ಬಿಬಿಎಂಪಿ ಮಾಹಿತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ನಿಮ್ಹಾನ್ಸ್ ಆಸ್ಪತ್ರೆ ಮತ್ತು ಅದರ ವಸತಿ ಸಂಕೀರ್ಣದಲ್ಲಿರುವ ಬೀದಿ ನಾಯಿ ಹಾವಳಿ ನಿಯಂತ್ರಿಸಲು ಎಲ್ಲ ಕ್ರಮ ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ಮತ್ತು ನಿಮ್ಹಾನ್ಸ್ ಹೈಕೋರ್ಟ್‌ಗೆ ಭರವಸೆ ನೀಡಿದೆ.

ಬೀದಿ ನಾಯಿಗಳ ಹಾವಳಿ ತಡೆಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಬೇಕೆಂದು ಬಾಲಕಿ ಇನ್ಹಾರಿಕಾ ಸಲ್ಲಿಸಿದ್ದ ಅರ್ಜಿ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಂದಿತ್ತು.

ಬಿಬಿಎಂಪಿ ಮತ್ತು ನಿಮ್ಹಾನ್ಸ್ ಪರ ವಕೀಲರು ಹಾಜರಾಗಿ, ನಾಯಿಗಳನ್ನು ಹಿಡಿಯಲು ಮತ್ತು ಅವುಗಳಿಗೆ ರೇಬಿಸ್ ಚುಚ್ಚುಮದ್ದು ಹಾಕಲು ಮತ್ತು ಅವುಗಳ ಸಂತತಿ ನಿಯಂತ್ರಣಕ್ಕೂ ಸಹ ಕ್ರಮ ಜರುಗಿಸಲಾಗಿದೆ. ಸಂಸ್ಥೆಯ ಆವರಣದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸಲು ಮತ್ತು ಪ್ರಾಣಿಗಳ ಜನನ ನಿಯಂತ್ರಣ ಮತ್ತು ಲಸಿಕೀಕರಣ ನೋಡಿಕೊಳ್ಳಲು ಸಮಿತಿ ರಚಿಸಲಾಗಿದೆ. ಸಮಿತಿಯು ಇಡೀ ಸಂಸ್ಥೆ ಮತ್ತು ಅದರ ವಸತಿ ಸಂಕೀರ್ಣದ ಆವರಣದಲ್ಲಿನ ಬೀದಿ ನಾಯಿಗಳ ಮೇಲೆ ನಿಗಾವಹಿಸಲಿದೆ ಎಂದು ಭರವಸೆ ನೀಡಿದರು.

ಈ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ, ಬಿಬಿಎಂಪಿ, ನಿಮ್ಹಾನ್ಸ್ ಸಂಸ್ಥೆ ಭರವಸೆ ನೀಡಿರುವ ಹಿನ್ನೆಲೆಯಲ್ಲಿ ಹೆಚ್ಚಿನ ನಿರ್ದೇಶನ ನೀಡುವ ಅಗತ್ಯವಿಲ್ಲ. ಆದರೆ, ನಾಯಿ ಕಡಿತಕ್ಕೆ ತುತ್ತಾದವರಿಗೆ ಪರಿಹಾರ ನೀಡಲು ಬಿಬಿಎಂಪಿ ಮಾರ್ಗಸೂಚಿ ಸಿದ್ಧಪಡಿಸಬೇಕು ಎಂದು ನಿರ್ದೇಶಿಸಿ ಅರ್ಜಿ ಇತ್ಯರ್ಥಪಡಿಸಿತು.




**CHANGE OF NAME**
I, Madhuri Murthy D/o Shri M. Rama Murthy, resident of Bengaluru, have changed my name from **Madhuri alias Madhuri M** to **Madhuri Murthy** vide affidavit dated 23/08/2022 before Advocate and Notary Smt. K.N. Ramadevi, Bengaluru.

**CHANGE OF NAME**
I, ROSEY MARY, W/o. Balaraj S. J., Aged about 44 years, R/at. #79, Nakshatra Layout, Kothanur, Hennur Bagalur Main Road, Bangalore, Karnataka-560077, have changed my name From **ROSEY MARY to ROSE MARY** vide affidavit dt. 19-08-2022 before Advocate and Notary D. Rajanna, Bangalore.

**CHANGE OF NAME**
I, G.PURUSHOTHMAN, residing at: No. 207/52, 4th Main, KR Nagar, Om Shakthi Temple Road, KSRP Quatras, Choodasandra, Bengaluru-560099 have changed my name to **PURUSHOTHAM.G** vide affidavit dt. 22-08-2022 before Advocate and Notary K.V. Mani, Bangalore.

